**ಓ ಎಸ್ ನಂಃ 199-2022** **ಪಿ ಡಬ್ಲೂ - 1**

**ಸಾಕ್ಷಿಯನ್ನು ದಿನಾಂಕಃ 06.07.2024 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ** ಪ್ರತಿವಾದಿಗಳ ಪರ ಶ್ರೀ ಆರ ಸಿ ಹೆಚ್ ವಕೀಲರಿಂದ

ನಾನು ಬಿ ಇ ಪದವಿದರ. ನಾನು ಪ್ರಸ್ತುತ ವಾದಿ ಏಜೆನ್ಸಿಯ ವ್ಯವಹಾರವನ್ನು 2016 ರಿಂದ ನೋಡಿಕೊಳ್ಳುತ್ತಿದೇನೆ. ನಮ್ಮ ಏಜೆನ್ಸಿಯ ಎಲ್ಲಾ ವ್ಯವಹಾರಗಳ ಮಾಹಿತಿ ನನಗೆ ಇದೆ. ವ್ಯವಹಾರದ ನಿಯಮಗಳು ಸಹ ನನಗೆ ಗೊತ್ತಿದೆ. ಈಗಲು ಸಹ ಬೇರೆ ಪಂಚಾಯ್ತಿ ಕಚೇರಿಗಳಿಗೆ ನಮ್ಮ ಏಜೆನ್ಸಿಯಿಂದ ಬೋರವೆಲ್‌ಗೆ ಸಂಬಂದಿಸಿದ ಮತ್ತು ರೈತರಿಗೆ ಸಂಬಂದಿಸಿದ ವಸ್ತುಗಳನ್ನು ಮಾರಾಟ ಮಾಡುತ್ತಿದ್ದೇವೆ ಎಂದರೆ ಸರಿ. ಮೊದಲು ಪಂಚಯ್ತಿಯವರು ವಸ್ತುಗಳ ಇಂಡೆಂಟನ್ನು ನೀಡುತ್ತಾರೆ. ನಂತರ ನಾವು ವಸ್ತುಗಳನ್ನು ಕೊಡುತ್ತೇವೆ. ಇಂಡೆಂಟನ 1 ಪ್ರತಿಯನ್ನು ನಮ್ಮಲ್ಲಿ ಇಟ್ಟುಕೊಂಡು ಮತ್ತೊಂದು ಪ್ರತಿಗೆ ನಮ್ಮ ಏಜೆನ್ಸಿಯ ಮುದ್ರೆಯನ್ನು ಹಾಕಿ ಪಂಚಾಯ್ತಿಯವರಿಗೆ ಕೊಡುತ್ತೇವೆ. ನಂತರ ಬಿಲ್ಲನ್ನು ತಯಾರು ಮಾಡಿ ವಸ್ತುಗಳನ್ನು ಸದರಿ ಪಂಚಾಯ್ತಿಗೆ ಡಿಲೆವರಿ ಮಾಡುತ್ತೇವೆ. ವಸ್ತುಗಳನ್ನು ಡಿಲೆವರಿ ಮಾಡಿದ ಕೂಡಲೆ ಪಂಚಾಯ್ತಿಯವರು ಬಿಲ್ಲಿನ ಹಣ ಪಾವತಿ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಂಚಾಯ್ತಿಯವರಿಗೆ ಗ್ರಾಂಟ ಬಂದ ನಂತರ ಕೊಡುತ್ತಾರೆ ಎಂದು ನುಡಿಯುತ್ತಾರೆ. ನಂಬಿಕೆಯ ಮೇಲೆ ಕ್ರೆಡಿಟ್ ಆಧಾರದಂತೆ ನಾವು ವಸ್ತುಗಳನ್ನು ಡಿಲೆವರಿ ಮಾಡಿ ನಂತರ ಪಂಚಾಯ್ತಿಯವರು ಫಂಡ ಬಂದ ನಂತರ ನಮಗೆ ಹಣ ಕೊಡುವುದು ಮಾಡುತ್ತಿದ್ದಾರೆ.

1 ನೇ ಪ್ರತಿವಾದಿಗೆ ದಿಃ17.03.2023 ರಂದು ವಸ್ತುಗಳನ್ನು ಡೆಲವರಿ ಮಾಡಿದ್ದೇವೆ. ನಿಪಿ 4 ರಲ್ಲಿ ನಮ್ಮ ಸಹಿ ಇಲ್ಲ ಎಂದರೆ ಸರಿ. ನಿಪಿ 4 ರಲ್ಲಿ ದಿಃ17.04.2020 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ತಪ್ಪಾಗಿ ನಮೂದು ಮಾಡಿದ್ದಾರೆಂದು ಮತ್ತು ಪಂಚಾಯ್ತಿಯ ಸದಸ್ಯರೊಬ್ಬರು ನಿಪಿ 4 ರಲ್ಲಿ ಸಹಿ ಮಾಡಿ ತಮ್ಮ ಸಹಿ ದಿನಾಂಕ 17.03.2020 ಎಂದು ನಮೂದು ಮಾಡಿ ವಸ್ತುಗಳನ್ನು ಪಡೆದುಕೊಂಡು ಹೋಗಿದ್ದಾರೆಂದು ನುಡಿಯುತ್ತಾರೆ. ಪಂಚಾಯ್ತಿಯ ಸದಸ್ಯರಾಗಿದ್ದಂತಹ ವಿ ಎಮ ದಳವಾಯಿ ಮತ್ತು ನಾನು ಸೇರಿಕೊಂಡು ನಿಪಿ 4 ನ್ನು ಸೃಷ್ಠಿ ಮಾಡಿದ್ದೇವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿಪಿ 4 ರಲ್ಲಿ ಪಂಚಾಯ್ತಿಯ ಅಧ್ಯಕ್ಷರ ಸಹಿಯು ಸಹ ಇದೆ ಎಂದು ನುಡಿಯುತ್ತಾರೆ. 2020 ರಲ್ಲಿ ಸಂಗಮೇಶ್ವರ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಯಾರು ಆಗಿದ್ದರೆಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ಸಮಯದಲ್ಲಿ ಪಂಚಾಯ್ತಿಯ ಅಭಿವೃದ್ದಿ ಅಧಿಕಾರಿಗಳಾಗಿ ರಾಯನಾಳ ರವರು ಇದ್ದರು ಎಂದು ನುಡಿಯುತ್ತಾರೆ. ನಿಪಿ 4 ರಲ್ಲಿರುವ ಸಹಿಯು 2020 ರಲ್ಲಿದಂತಹ ಅಧ್ಯಕ್ಷರ ಸಹಿ ಎಂದು ನನಗೆ

ಖಚಿತವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುದುವರೆದು ಅದು 2020 ರ ಅವದಿಯ ಅಧ್ಯಕ್ಷರ ಸಹಿ ಎಂದು ನುಡಿಯುತ್ತಾರೆ. ಸದರಿ ದಿನ ನಿಪಿ 2 ನ್ನು ಕೊಟ್ಟಿದ್ದೆ. ನಿಪಿ 2 ನಮ್ಮ ಕಚೇರಿಯ ಪ್ರತಿಯಾಗಿರುವುದರಿಂದ ಅದರಲ್ಲಿ ಅಧ್ಯಕ್ಷರ ಮತ್ತು ಪಿಡಿಓ ರವರ ಸಹಿ ಇಲ್ಲ. ಸಾಕ್ಷಿ ಮುಂದುವರೆದು ನಿಪಿ 2 ರಲ್ಲಿ ಪಂಚಯ್ತಿಯ ಸದಸ್ಯರು ಸಹಿ ಮಾಡಿದ್ದಾರೆಂದು ನುಡಿಯುತ್ತಾರೆ. ನನ್ನ ತಂದೆ 2004 ರಲ್ಲಿ ವ್ಯಾಪರವನ್ನು ಪ್ರಾರಂಬಿಸಿದ್ದರು. ನಾವು ಸಹ ಕಂಪನಿಗಳಿಂದ ವಸ್ತುಗಳನ್ನು ಆರ್ಡರ ಮಾಡಿ ಬಿಲ್ಲ ಪಡೆದುಕೊಂಡು ವಸ್ತುಗಳನ್ನು ಸ್ವೀಕರಿಸಿ ಹಣವನ್ನು ಪಾವತಿ ಮಾಡುತ್ತೇವೆ. ನಾವು ಕ್ರೇಟಿಟ್ ಅದಾರದ ಮೇಲೆ ವಸ್ತುಗಳನ್ನು ಕಂಪನಿಗಳಿಂದ ಖರೀದಿಸುವುದಿಲ್ಲ. ಪಂಚಾಯ್ತಿಯ ಸದಸ್ಯರೊಬ್ಬರು ವಸ್ತುಗಳನ್ನು ಕೇಳಿದರೆ ನಾವು ಕೊಡುತ್ತಿದ್ದೇವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಂಚಾಯ್ತಿಯ ಅಧ್ಯಕ್ಷರು ಅಥವಾ ಪಿಡಿಓ ರವರ ಸಹಿ ಇದ್ದರೆ ಮಾತ್ರ ವಸ್ತುಗಳನ್ನು ಕೊಡುತ್ತಿರುವುದಾಗಿ ನುಡಿಯುತ್ತಾರೆ. ಪಂಚಾಯ್ತಿಯ ಸದಸ್ಯರು ಬಿಲ್ ಮೇಲೆ ಸಹಿ ಮಾಡಿ ವಸ್ತುಗಳನ್ನು ಪಡೆದುಕೊಂಡು ಹೋಗಿರುವುದರಿಂದ ಸದರಿ ವಸ್ತುಗಳು ಪಂಚಾಯ್ತಿಗೆ ತಲುಪಿದೆ ಎಂದು ನಮಗೆ ಖಾತ್ರಿ ಆಗಿದೆ. ನನ್ನ ಮತ್ತು ಪಂಚಾಯ್ತಿಯ ಸದಸ್ಯರಾದಂತಹ ದಳವಾಯಿ ರವರ ಮದ್ಯ ಆದಂತಹ ವಸ್ತುಗಳ ವ್ಯವಹಾಕ್ಕೆ ಸಂಬಂದಿದಂತೆ ಅನಧಿಕೃತವಾಗಿ ಪಂಚಯ್ತಿಯಿಂದ ಹಣವನ್ನು ವಸೂಲಿ ಮಾಡಲು ಈ ದಾವೆಯನ್ನು ಹೂಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಿಪಿ 3 ರಲ್ಲಿ ಪಿಡಿಓ ಪರವಾಗಿ ಸಹಿ ಮಾಡಿರುವ ವ್ಯಕ್ತಿ ಯಾರು ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ತಾನು ಪಂಚಾಯ್ತಿ ಕಚೇರಿಗೆ ನಿಪಿ 3 ನ್ನು ಕೊಟ್ಟಾಗ ಅಲ್ಲಿದ್ದಂತಹ ವ್ಯಕ್ತಿ ಸಹಿ ಮಾಡಿ ಕೊಟ್ಟರು ಎಂದು ನುಡಿಯುತ್ತಾರೆ. ಎಲ್ಲಾ ಪಂಚಾಯ್ತಿಗಳಲ್ಲಿ ಪತ್ರ ವ್ಯವಹಾರಗಳನ್ನು ದಾಖಲಿಸುವ ಸಲುವಾಗಿ ಗುಮಾಸ್ತರು ಇರುತ್ತಾರೆಂದರೆ ಸರಿ. ಸದಿರಿ ಗುಮಾಸ್ತ ಯಾವುದೇ ಅರ್ಜಿ ಅಥವಾ ಪತ್ರಗಳಿಗೆ ಸ್ವೀಕೃತಿ ಸಹಿ ಮಾಡಿಕೊಡುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಕೆಲವೊಮ್ಮೆ ಪಂಚಾಯ್ತಿಯ ಅಧ್ಯಕ್ಷರು ಅಥವಾ ಪಿಡಿಓ ಅಥವಾ ಕಾರ್ಯದರ್ಶಿ ಸಹಿ ಮಾಡಿಕೊಡುತ್ತಾರೆಂದು ನುಡಿಯುತ್ತಾರೆ. ನಿಪಿ 3 ಪಂಚಾಯ್ತಿಯ ವ್ಯವಹಾರಕ್ಕೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ಅದನ್ನು ನಾನು ಸೃಷ್ಟಿ ಮಾಡಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿಗಳಿಗೆ ವಕೀಲರ ಮುಖಾಂತರ ನಿಪಿ 7 ರಂತೆ ನೋಟಿಸ ಕೊಟ್ಟಿದ್ದೆ. ನಿಪಿ 7 ನ್ನು ಕಳುಹಿಸಿರುವ ಬಗ್ಗೆ ನಾನು ಅಂಚೆ ರಶೀದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ 6 ರಲ್ಲಿ ನೋಟಿಸು ಮುಟ್ಟಿರುವ ಬಗ್ಗೆ ನಮೂದು ಇದೆ. ನಿಪಿ 6 ರಲ್ಲಿ ಪ್ರತಿವಾದಿಗಳಿಗೆ ನಿಪಿ 7 ಮುಟ್ಟಿರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ವ್ಯವಹಾರವು ನನ್ನ ಮತ್ತು ಪಂಚಾಯ್ತಿಯ ಸದಸ್ಯರ ವಯಕ್ತಿಕ ವಾಗಿದ್ದರಿಂದ ಉದ್ದೇಶ

ಪೂರ್ವಕವಾಗಿ ನಿಪಿ 7 ಪ್ರತಿವಾದಿಗಳಿಗೆ ತಲುಪದಂತೆ ನಾನು ಮಾಡಿದ್ದೇನೆಂದರೆ ಸರಿಯಲ್ಲ. ನಿಪಿ 7 ನ್ನು ಕೊಡುವ ಕಾಲಕ್ಕೆ ದಳವಾಯಿಯವರು ಪಂಚಾಯ್ತಿ ಸದಸ್ಯರು ಆಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಹಣ ಪಾವತಿ ವಿಚಾರವಾಗಿ ನಾನು ದಳವಾಯಿಯವರಿಗೆ ಕೇಳಿಲ್ಲ. ಸಾಕ್ಷಿ ಮುಂದುವರೆದು ಸದರಿ ವಿಚಾರವಾಗಿ ನಾನು ಪಂಚಾಯ್ತಿಯ ಅಧ್ಯಕ್ಷರು ಮತ್ತು ಪಿಡಿಓ ರವರ ಸಂಪರ್ಕದಲ್ಲಿ ಇದ್ದಿದ್ದಾಗಿ ನುಡಿಯುತ್ತಾರೆ. 2020 ರ ಅವದಿಯ ಅಧ್ಯಕ್ಷ ಮತ್ತು ಪಿಡಿಓ ರವರನ್ನು ನ್ಯಾಯಲಯಕ್ಕೆ ಸಾಕ್ಷ ಮಾಡಿಸುವಿರಾ ಎಂದರೆ ಸಾಕ್ಷಿಯು ಅವಶಕ್ಕತೆ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ವಯಕ್ತಿಕ ವ್ಯವಹಾರ ಹೊರಗಡೆ ಬರುತ್ತಿದೆ ಎಂದು ಅವರ ಸಾಕ್ಷ ಅವಶ್ಯಕತೆ ಇಲ್ಲ ಎಂದು ಹೇಳುತ್ತಿದ್ದೆನೆಂದರೆ ಸರಿಯಲ್ಲ. ನಮ್ಮಲ್ಲಿ ಎಲೆಕ್ಟರಿಕ್ ವಸ್ತುಗಳು ಸಹ ಸಿಗುತ್ತವೆ. ನಿಪಿ 2 ರಲ್ಲಿ ಹಣದ ಮೊತ್ತದಲ್ಲಿ ತಿದ್ದುಪಡೆ ಆಗಿದೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಕೊನೆಯ ಐಟಂ ನಲ್ಲಿ 10,000 ಎಂದು ತಿದ್ದಲಾಗಿದೆ ಎಂದರೆ ಸಾಕ್ಷಿಯು ಪೆನ್ನು ಮೂಡದ ಕಾರಣ ಒತ್ತಿ ಬರೆಯಲಾಗಿದೆ ಎಂದು ನುಡಿಯುತ್ತಾರೆ. ನಿಪಿ 2 ರಲ್ಲಿ ಕ್ರಮ ಸಂಖ್ಯೆ ಬರೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 2020 ರಲ್ಲಿ ಕ್ರಮ ಸಂಖ್ಯೆ ಮತ್ತು ಹೆಚ್ ಎಸ್ ಎನ್ ಕೋಡ ಕಡ್ಡಾಯ ಇರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕಚೇರಿಯ ಬಿಲ್ಲ ಪ್ರತಿಯ ಆದಾರದ ಮೇಲೆ ಐಟಂಗಳ ಒಟ್ಟು ಡೆಲವರಿಯನ್ನು ನಾವು ಲೆಕ್ಕ ಮಾಡುತ್ತೇವೆ. ನಿಪಿ 2 ರಲ್ಲಿ ನಮೂದು ಮಾಡಿರುವ ವಸ್ತುಗಳಿಗೆ ವಾರೆಂಟಿ ಇಲ್ಲ. ನಿಪಿ 2 ರಲ್ಲಿ ಇ ವೆ ಬಿಲ್ಲ ನಂಬರನ್ನು ನಮೂದು ಮಾಡಿಲ್ಲ ಎಂದರೆ ಸರಿ. ವ್ಯವಹಾರವು ನಮ್ಮ ವಯಕ್ತಿಕ ವಾಗಿದ್ದರಿಂದ ಸದರಿ ನಂಬರನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಗಳ ಮದ್ಯ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**